ಸರ್ಕಾರಿ ಶಾಲೆಗಳ ಬಡತನ

1441(1702); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಜೆ.ಸಿ. ನಗರ ವಾರ್ಡ್, ಮಠದಹಳ್ಳಿಯಲ್ಲಿರುವ ಎನ್.ಎಸ್. ಲೇನ್‌ನಲ್ಲಿ ನಡೆಯುತ್ತಿರುವ ಸರ್ಕಾರಿ ಶಾಲೆಗಳ ಜಾಗವು ಯಾರ ಒಡೆತನದಲ್ಲಿದೆ;

ಆ) ಈ ಶಾಲೆಗಳ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಇ) ಈ ಶಾಲೆಗಳು ನಡೆಯುತ್ತಿರುವ ಜಾಗಕ್ಕೆ ಸಂಬಂಧಿಸಿದಂತೆ ವಿವಾದವೇನಾದರೂ ಇದೆಯೇ, ಇದ್ದಲ್ಲಿ ಇದನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಈ) ಈ ವಿವಾದವನ್ನು ಬಗೆಹರಿಸಿ ಕಾಲಮಿತಿಯೊಳಗೆ ಶಾಲೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ತೀರ್ಮಾನಿಸಿದೆಯೇ.?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಈ ಶಾಲೆಯು 1885ರಲ್ಲಿ ಪ್ರಾರಂಭವಾಗಿದ್ದು, ಸರ್ವೆ ನಂ.1ರಲ್ಲಿ ಎರಡು ಎಕರೆ ಮೂರು ಗುಂಟೆ ವಿಸ್ತೀರ್ಣದಲ್ಲಿದ್ದು, ಈ ಸ್ಥಳವು ರಕ್ಷಣಾ ಇಲಾಖೆಗೆ ಸೇರಿದ್ದೆಂದು ಮಾಲೀಕತ್ವದ ಬಗ್ಗೆ ವಿವಾದವಿದೆ.

ಆ) ಪ್ರಸ್ತುತ ಯಾವುದೇ ಕ್ರಮ ವಹಿಸಿರುವುದಿಲ್ಲ.

ಇ) ಇದೆ.

ಜಮೀನಿಗೆ ಸಂಬಂಧಿಸಿದ ವಿವಾದವಾಗಿರುವುದರಿಂದ ಇದನ್ನು ಬಗೆಹರಿಸಲು ರಕ್ಷಣಾ ಇಲಾಖೆಯನ್ನು ಸಂಪರ್ಕಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ವಿವಾದವನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.